# ಓದಿನಿಂದ ತಪ್ಪಿಸಿಕೊಳ್ಳಲು ನಟನೆಯ ಅಪ್ಪಿದೆ

**ವರ್ಷಿತಾ ಸೇನಿ**
ಉದಯದ 'ಜನನಿ'ಯ ಅನಘಾ



◆ ನಿಮ್ಮ ಪರಿಚಯ ಹೇಳಿ.

ಮೂಲತಃ ರಂಗಭೂಮಿ ಕಲಾವಿದೆ. ಎಂಟು ವರ್ಷಗಳ ಕಾಲ ರಂಗಭೂಮಿಯಲ್ಲಿ ದುಡಿದೆ. ಒಂಬತ್ತು ವರ್ಷಗಳಿಂದ ಕಿರುತೆರೆಯಲ್ಲಿ ತೊಡಗಿದ್ದೇನೆ. ಇದರ ಜೊತೆ ನಾಲ್ಕು ಕಿರುಚಿತ್ರಗಳಲ್ಲಿ ನಟಿಸಿದ್ದೇನೆ. ಮೊದಲ ಧಾರಾವಾಹಿ ಪುನೀತ್ ರಾಜಕುಮಾರ್ ನಿರ್ಮಾಣದ 'ಮನೆದೇವ್ರು'ದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದೆ. ನಂತರ 'ಪಾರು', 'ಕಸ್ತೂರಿ ನಿವಾಸ'ದಲ್ಲಿ ಮಾಡಿದೆ. ಈಗ 'ಜನನಿ'ಯಲ್ಲಿ ಅನಘಾ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ.

ಅನಘಾ ಹೇಗೆಂದರೆ, ತನ್ನ ಭಾವನೆಯನ್ನು ಅತಿರೇಕದಿಂದ ಪ್ರಕಟಿಸುತ್ತಾಳೆ. ಆಕೆ ಸಿಟ್ಟಾದರೆ ಸಿಡಿಮಿಡಿಗೊಂಡಂತೆ, ಖುಷಿಯಾದಡೆ ಅದನ್ನೂ ತಕ್ಷಣ ಭಾವುಕಳಾಗಿ ತೋರಿಸುತ್ತಾಳೆ. ಅತ್ಯಂತ ಭಾವ ಜೀವಿ. ತಮಾಷೆಯಂತೆ ಕಾಣಿಸುತ್ತಾಳೆ. ಹಾಗಾಗಿ ಆಕೆ ತೆರೆಯ ಮೇಲೆ ಕಂಡರೆ ವೀಕ್ಷಕರ ಮೊಗದಲ್ಲಿ ಮಂದಹಾಸ ಮೂಡುತ್ತದೆ. ನಾನು ಅದನ್ನು ತುಂಬ ಖುಷಿಯಿಂದ ಮಾಡುತ್ತಿದ್ದೇನೆ.

◆ ಬೇರೆ ಬೇರೆ ಪ್ರದರ್ಶನ ಕಲಾ ಮಾಧ್ಯಮಗಳಲ್ಲಿ ನಟನೆಯ ಅಂತರ ಸಂಬಂಧ ಹೇಗಿರುತ್ತದೆ?

ನಟನೆ ಅಂದರೆ ಎಲ್ಲ ಒಂದೇ ಎನ್ನುವ ಭಾವನೆ ನನ್ನದು. ಕಿರುಚಿತ್ರ, ಸಿನಿಮಾ, ಕಿರುತೆರೆ, ರಂಗಭೂಮಿ ಎಂದು ವರ್ಗೀಕರಿಸಿ ನೋಡಲು ಬರುವುದಿಲ್ಲ. ಇದರಲ್ಲಿ ಭಿನ್ನತೆಯನ್ನು ಗುರುತಿಸಲು ನನಗೆ ಇಷ್ಟ ಇಲ್ಲ. ನಟನೆಯ ಕೆಲಸ ಎಂದರೆ ಯಾವುದೇ ಆಗಿದ್ದರೂ ಒಂದೇ. ಸಿನಿಮಾಕ್ಕಿಂತ ಕಿರುತೆರೆಯಲ್ಲಿ ಒತ್ತಡ ಸ್ವಲ್ಪ ಹೆಚ್ಚಿರುತ್ತದೆ ಎಂದು ಮಾತ್ರ ಹೇಳಬಲ್ಲೆ.

◆ ರಂಗಪ್ರೇಮ ಹುಟ್ಟಿದ್ದು ಹೇಗೆ?

ಚಿಕ್ಕವಯಸ್ಸಿನಿಂದಲೂ ಗಾಯನ, ನಟನೆ, ಆಟ, ಡಾನ್ಸ್ ಇಷ್ಟ. ಓದುವುದರಿಂದ ತಪ್ಪಿಸಿಕೊಳ್ಳಲು ಬೇರೆಯದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೆ. ಕ್ಲಾಸ್ ಇದ್ದಾಗ ಸ್ಪೋರ್ಟ್ಸ್ ಅಥವಾ ಡಾನ್ಸ್ ಇದ್ದರೆ ತಾಲೀಮಿಗೆ ಹೋಗಬೇಕು ಎಂದು ತಪ್ಪಿಸಿಕೊಳ್ಳಲು ಅನುಕೂಲವಾಗುತ್ತಿತ್ತು. ಹಾಗಾಗಿ ಚಿಕ್ಕವಯಸ್ಸಿನಿಂದಲೂ ಅದರ ಮೋಹ ಬೆಳೆದಿತ್ತು. ಆದರೆ ನಟನೆಯನ್ನು ವೃತ್ತಿಯಾಗಿ ತೆಗೆದುಕೊಳ್ಳಬೇಕು ಎಂದು ಖಂಡಿತ ಅಂದುಕೊಂಡಿರಲಿಲ್ಲ. ಈ ಬಗ್ಗೆ ಕುತೂಹಲ ಇತ್ತು. ಟೀವಿಯಲ್ಲಿ ಡಾನ್ಸ್ ಬಂದರೆ ಅದನ್ನು ಅನುಕರಣೆ ಮಾಡುತ್ತಿದ್ದೆ. ಬೆಂಗಳೂರಿನಲ್ಲಿ ವಿಜಯ ಕಾಲೇಜಿಗೆ ಪದವಿಗೆ ಸೇರಿದೆ. ಅಲ್ಲಿ ಕಾಲೇಜು ರಂಗತಂಡವಿತ್ತು. ಆ ತಂಡ ವಿಜಯಪುರದಲ್ಲಿ ಒಂದು ಪ್ರದರ್ಶನವನ್ನು ನೀಡಲು ಅಣಿಯಾಗುತ್ತಿತ್ತು. ಆ ನಾಟಕಕ್ಕೆ ಡಾನ್ಸರ್ ಬೇಕಿತ್ತು. ತರಗತಿಗಳಿಗೆ ನೊಟೀಸ್ ಕಳಿಸಿದರು. ನಾನೂ ಹೆಸರು ಕೊಟ್ಟೆ. ಡಾನ್ಸ್ ಹೇಳಿಕೊಟ್ಟರು. ಚೆನ್ನಾಗಿ ನೃತ್ಯ ಮಾಡಿದವರನ್ನು ಆಯ್ಕೆ ಮಾಡಿಕೊಂಡರು. ದ.ರಾ. ಬೇಂದ್ರೆ ಜೀವನ ಆಧಾರಿತ 'ಗಂಗಾವತರಣ' ರೂಪಕದಲ್ಲಿ ನೃತ್ಯ ಮಾಡಿದೆ. ನಂತರ ಕೆ.ಎಸ್. ನರಸಿಂಹಸ್ವಾಮಿ ಅವರ ಬದುಕನ್ನು ಕಟ್ಟಿಕೊಡುವ 'ಮೈಸೂರು ಮಲ್ಲಿಗೆ' ರೂಪಕದಲ್ಲಿ ಡಾನ್ಸ್ ಜೊತೆಗೆ ನಾಯಕಿಯ ತಂಗಿಯ ಪಾತ್ರವನ್ನೂ ಮಾಡಿದೆ. 'ಮಾವಿನಗುಡಿ'ಯಲ್ಲಿ ನಾಯಕಿ ಪಾತ್ರ ಮಾಡಿದೆ. ಇದೇ ನಾನು ರಂಗಭೂಮಿಗೆ ಬರಲು ದೊಡ್ಡ ಅವಕಾಶವನ್ನು ಕಲ್ಪಿಸಿತು. ಈಗಲೂ ನನಗೆ ಸೀರಿಯಲ್‌ಗಳಿಗಿಂತ ರಂಗಭೂಮಿ ಇಷ್ಟ. ರಂಗಭೂಮಿಯಲ್ಲಿ ನಟಿಸುತ್ತಿದ್ದ ನನಗೆ ಸ್ನೇಹಿತರು ಸಿನಿಮಾ–ಟೀವಿಗೆ ಪ್ರಯತ್ನಿಸಲು ಹುರಿದುಂಬಿಸಿದರು. ಡಿಗ್ರಿ ಮುಗಿಯುವ ಹೊತ್ತಿಗೆ ಆಡಿಷನ್ ನೀಡಲು ಆರಂಭಿಸಿದೆ. ಎಲ್ಲ ಕಡೆ ಆಯ್ಕೆ ಆಗುತ್ತಿದ್ದೆ. 'ಮನೆದೇವ್ರು' ಪಾತ್ರ ನನಗೆ ಇಷ್ಟ ಆಗಿ ಅದಕ್ಕೆ ಬಣ್ಣ ಹಚ್ಚಿದೆ.

◆ ಅಭಿನಯ ಕಲಿಸಲು ಕೋರಿಕೆ ಬಂದರೆ ನಿಮ್ಮ ಪ್ರತಿಕ್ರಿಯೆ ಹೇಗಿರುತ್ತದೆ?

ಮೊದಲು ಸೀರಿಯಲ್‌ಗಳಲ್ಲಿ ಜೂನಿಯರ್ ಹೀಗೆ ಬರ್ತಿದ್ದರು. ಅವರು ನಟನಾ ಕ್ಷೇತ್ರದಲ್ಲಿ ಬೆಳೆಯುವ ಉದ್ದೇಶದಿಂದ ಕಲಿಕೆಯನ್ನು ಬಯಸಿದ್ದರು. ನನಗೆ ಗೊತ್ತಿರುವ ಮಟ್ಟಿಗೆ ಹೇಳಿಕೊಡುತ್ತಿದ್ದೆ. ಈಗಲೂ ಅಪೇಕ್ಷೆ ಇದ್ದವರಿಗೆ ಸಾಧ್ಯ ಆದರೆ ಹೇಳಿಕೊಡುವೆ. ವೈಯಕ್ತಿಕವಾಗಿ ನಾನು ನಟನೆಯನ್ನೇ ಮಾಡಬೇಕು ಎಂದು ಬಂದವಳಲ್ಲ. ಟೀವಿ–ಸಿನಿಮಾ ನೋಡಿಯೇ ನಟನೆ ಕಲಿತವಳು. ಸದ್ಯ ಬೇರೆ ಬೇರೆ ಅವಕಾಶಗಳನ್ನು ನೋಡುತ್ತಿದ್ದೇನೆ. ಸಿನಿಮಾಗಳಿಗೆ ಈ ಮೊದಲು ಪಾತ್ರಗಳು ಇಷ್ಟ ಆಗಿಲ್ಲ ಎನ್ನುವ ಕಾರಣಕ್ಕೆ ಮಾಡಿರಲಿಲ್ಲ.

■ ರಾಘವೇಂದ್ರ ಕೆ.